## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2023-24ನೇ ಸಾಲಿನ ಅಯವ್ಯಯ ಘೋಷಣೆಯ ಕಂಡಿಕೆ-40ರಲ್ಲಿನ ನೂತನ ಯೋಜನೆ ಕೃಷಿ ನವೋದ್ಯಮ ಅನುಷ್ಠಾನ ಮಾರ್ಗಸೂಚಿ ಕುರಿತು.

**ಓದಲಾಗಿದೆ:** 1.ಸರ್ಕಾರದ ಆದೇಶ ಸಂಖ್ಯೆ:AGRI/176/AML/2023, ದಿನಾಂಕ:27-09-2023.

2.ಕೃಷಿ ಆಯುಕ್ತರು, ಕೃಷಿ ಇಲಾಖೆ ಇವರ ಪತ್ರ ಸಂಖ್ಯೆ:ಜಕೃನಿ(ಬೆಲ)/ಕೃನ/ಮಾರ್ಗಸೂಚಿ/2023-24, ದಿನಾಂಕ:10-10-2023.

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ 2023-24ನೇ ಸಾಲಿನ ಆಯವ್ಯಯದ ಕಂಡಿಕೆ-40 ರಲ್ಲಿ "ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಕೃಷಿ ಮಾರುಕಟ್ಟೆಗೆ ಸಂಬಂಧಿಸಿದ ವಲಯಗಳಲ್ಲಿ ನಾವೀನ್ಯತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೃಷಿ ಉದ್ಯಮಗಳಿಗೆ ಉತ್ತೇಜನ ನೀಡಲು 'ನವೋದ್ಯಮ' ಎಂಬ ಹೊಸ ಯೋಜನೆಯನ್ನು ಲೆಕ್ಕ ಶೀರ್ಷಿಕೆ:2401-00-195-0-01 ಉಪ ಶೀರ್ಷಿಕೆ:106ರಡಿ ಒದಗಿಸಲಾದ ರೂ.1000 ಲಕ್ಷಗಳ ಅನುದಾನದ ಮಿತಿಯೊಳಗೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಕೃಷಿ ಆಯುಕ್ತರು, ಕೃಷಿ ಇಲಾಖೆ, ಇವರು 2023-24ನೇ ಸಾಲಿನ ಕೃಷಿ ವಲಯದಲ್ಲಿ ವಿನೂತನ ಪರಿಕಲ್ಪನೆಯೊಂದಿಗೆ ರಾಜ್ಯಾದ್ಯಂತ ಕೃಷಿ ನವೋದ್ಯಮಗಳಿಗೆ ಉತ್ತೇಜನ ನೀಡುವ ಸಲುವಾಗಿ ಯೋಜನೆಯನ್ನು ರೂಪಿಸಿ, ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳನ್ನು ಸಲ್ಲಿಸಿ ಸೂಕ್ತ ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: AGRI/176/AML/2023**

**ಬೆಂಗಳೂರು, ದಿನಾಂಕ:24-11-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಕೃಷಿ ಮಾರುಕಟ್ಟೆಗೆ ಸಂಬಂಧಿಸಿದ ವಲಯಗಳಲ್ಲಿ ನಾವೀನ್ಯತೆಯನ್ನು

ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೃಷಿ ಉದ್ಯಮಗಳಿಗೆ ಉತ್ತೇಜನ ನೀಡಲು ' ಕೃಷಿ ನವೋದ್ಯಮ' ಎಂಬ ಹೊಸ ಯೋಜನೆಯನ್ನು, ಈ ಆದೇಶಕ್ಕೆ ಲಗತ್ತಿಸಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

P. Satya 24/11/2023
**(ಪಿ. ಸತ್ಯಭಾಮ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

**ಇವರಿಗೆ-**

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ) / (ಎ ಮತ್ತು ಇ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಯೋ. ಕಾ.ಸಂ & ಸಾಂ.ಇ) , ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ
3. ಸರ್ಕಾರದ ಕಾರ್ಯದರ್ಶಿ( ಆ&ಸಂ), ಆರ್ಥಿಕ ಇಲಾಖೆ, ವಿಧಾನಸೌಧ.
4. ಕೃಷಿ ಆಯುಕ್ತರು/ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ಆಯುಕ್ತರು/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
7. ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
8. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು
9. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು:**

1. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.

*******

ಸರ್ಕಾರಿ ಆದೇಶ ಸಂಖ್ಯೆ: AGRI/176/AML/2023, ಬೆಂಗಳೂರು, ದಿನಾಂಕ:24-11-2023ಕ್ಕೆ

## ಅನುಬಂಧ: ಕೃಷಿ ನವೋದ್ಯಮ ಕಾರ್ಯಕ್ರಮದ ಅನುಷ್ಠಾನ ಮಾರ್ಗಸೂಚಿ- 2023-24

ಆಹಾರ ಬೆಳೆಗಳ ಉತ್ಪಾದನೆಯಲ್ಲಿ ದೇಶವು ಸ್ವಾವಲಂಬನೆಯನ್ನು ಈಗಾಗಲೇ ಸಾಧಿಸಿದ್ದು ಉತ್ಪಾದಕತೆಯ ಹೆಚ್ಚಳ, ಸಂಪನ್ಮೂಲಗಳ ಸದ್ಬಳಕೆ, ಸುಧಾರಿತ ಕೃಷಿ ಜೊತೆಗೆ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ಮೌಲ್ಯವರ್ಧನೆಯಿಂದ ರೈತರ ಆದಾಯ ಹೆಚ್ಚಿಸುವಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಈಗಾಗಲೇ ಹಲವಾರು ರೈತರು ಉದ್ಯಮಿಗಳಾಗಿ ಸಂಸ್ಕರಣೆ ಹಾಗೂ ಮೌಲ್ಯವರ್ಧನೆಯಿಂದ ತಮ್ಮ ಉತ್ಪನ್ನವನ್ನು ಮಧ್ಯವರ್ತಿಗಳಿಲ್ಲದೆ ಮಾರಾಟ ಮಾಡುವಲ್ಲಿ ಯಶಸ್ವಿಯಾಗಿರುತ್ತಾರೆ.

ಮಾನ್ಯ ಮುಖ್ಯಮಂತ್ರಿಗಳು, 2023-24ರ ಆಯವ್ಯಯ ಭಾಷಣದ ಕಂಡಿಕೆ- 40 ರಲ್ಲಿ "ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಕೃಷಿ ಮಾರುಕಟ್ಟೆಗೆ ಸಂಬಂಧಿಸಿದ ವಲಯಗಳಲ್ಲಿ ನಾವೀನ್ಯತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೃಷಿ ಉದ್ಯಮಗಳಿಗೆ ಉತ್ತೇಜನ ನೀಡಲು 'ನವೋದ್ಯಮ' ಎಂಬ ಹೊಸ ಯೋಜನೆಯಡಿ 10.00 ಕೋಟಿ ರೂ. ಒದಗಿಸಲಾಗುವುದು" ಎಂದು ಘೋಷಿಸಿರುತ್ತಾರೆ. ಹಾಗೆಯೇ ಸರ್ಕಾರದ ಆದೇಶ ಸಂ: AGRI/176/AML/2023, ದಿನಾಂಕ. 27.09.2023ರನ್ವಯ ಅನುಮತಿ ನೀಡಿ ಆದೇಶಿಸಲಾಗಿರುತ್ತದೆ.

ಕೃಷಿ ಕ್ಷೇತ್ರದಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸಲು ಹಾಗೂ ಗ್ರಾಮೀಣ ಭಾಗದ ಯುವಕರಿಗೆ ಉದ್ಯೋಗ ಸೃಜನೆಗಾಗಿ ಕೃಷಿಯಲ್ಲಿನ ನೂತನ ತಾಂತ್ರಿಕತೆಗಳು ಹಾಗೂ ನವೀನ ಪರಿಕಲ್ಪನೆಗಳ ವಾಣಿಜ್ಯೀಕರಣವನ್ನು ಉತ್ತೇಜಿಸಲು ಕೃಷಿ ನವೋದ್ಯಮ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದೆ.

ಗ್ರಾಮೀಣ ಪ್ರದೇಶದಲ್ಲಿ ವಿದ್ಯಾವಂತ ಯುವಕರು ಕೃಷಿಯಲ್ಲಿ ಉದ್ಯಮ ಕೈಗೊಳ್ಳುವುದರಿಂದ ಉದ್ಯೋಗ ಸೃಜನೆಯಾಗಿ ನಿರುದ್ಯೋಗದ ಸಮಸ್ಯೆಗೆ ಪರಿಹಾರ ದೊರಕಿದಂತಾಗುತ್ತದೆ. ಕೃಷಿ ಪದವೀಧರರು, ವಿದ್ಯಾವಂತ ಯುವಕರು, ಆಸಕ್ತ ಪ್ರಗತಿಪರ ರೈತರು ಕೃಷಿಯಲ್ಲಿನ ನವೀನ ತಾಂತ್ರಿಕತೆಗಳು ಹಾಗೂ ನೂತನ ಪರಿಕಲ್ಪನೆಗಳಿಂದ ಕೃಷಿಯಲ್ಲಿ ನವೋದ್ಯಮಗಳನ್ನು ಪ್ರಾರಂಭಿಸುವುದರಿಂದ ಗ್ರಾಮೀಣ ಪ್ರದೇಶದ ಆದಾಯ ಹೆಚ್ಚಿಸುವುದರ ಜೊತೆಗೆ ಜನರು ಗ್ರಾಮೀಣ ಪ್ರದೇಶಗಳಲ್ಲಿಯೇ ನೆಲೆಸುವಲ್ಲಿ ಈ ಯೋಜನೆಯು ಸಹಕಾರಿಯಾಗಲಿದೆ.

ಕೃಷಿ ನವೋದ್ಯಮವೆಂದರೆ ಕೃಷಿ ವಲಯದ ನೂತನ ಆವಿಷ್ಕಾರಗಳು, ವಿನೂತನ ಪರಿಕಲ್ಪನೆಗಳು ಹಾಗೂ ಸಾಮಾಜಿಕವಾಗಿ ಬದಲಾವಣೆ ತರುವಂತಹ ಹಾಗೂ ಉದ್ಯೋಗ ಸೃಜನೆಗೆ ಅವಕಾಶವಿರುವ ಉದ್ದಿಮೆಗಳೆಂದು ವ್ಯಾಖ್ಯಾನಿಸಲಾಗಿದೆ.

### I. ಯೋಜನೆಯ ಗುರಿ ಮತ್ತು ಉದ್ದೇಶಗಳು:

**ಗುರಿ:** ಕೃಷಿ ಕ್ಷೇತ್ರದಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸಲು ಹಾಗೂ ಗ್ರಾಮೀಣ ಭಾಗದ ಯುವಕರಿಗೆ ಉದ್ಯೋಗ ಸೃಜನೆಗಾಗಿ ಕೃಷಿಯಲ್ಲಿನ ನೂತನ ತಾಂತ್ರಿಕತೆಗಳು ಹಾಗೂ ನವೀನ ಪರಿಕಲ್ಪನೆಗಳ ವಾಣಿಜ್ಯೀಕರಣವನ್ನು ಉತ್ತೇಜಿಸುವ ಗುರಿಯೊಂದಿಗೆ ಕೃಷಿ ನವ್ಯೋದ್ಯಮ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.

**ಉದ್ದೇಶಗಳು:**

1. ಕೃಷಿಯಲ್ಲಿನ ನವೀನ ತಾಂತ್ರಿಕತೆಗಳು ಹಾಗೂ ನೂತನ ಪರಿಕಲ್ಪನೆಗಳಿಂದ ಕೃಷಿಯಲ್ಲಿ ನವೋದ್ಯಮಗಳನ್ನು ಪ್ರಾರಂಭಿಸಿ ಕೃಷಿ ವಲಯದಲ್ಲಿ **ಉದ್ಯಮಶೀಲತೆಯನ್ನು** ಹೆಚ್ಚಿಸುವುದು.
2. ಕೃಷಿ ಪದವೀಧರರು, ವಿದ್ಯಾವಂತ ಯುವಕರು, ಆಸಕ್ತ ಪ್ರಗತಿಪರ ರೈತರು ಕೃಷಿಯಲ್ಲಿ ನವೋದ್ಯಮ ಆರಂಭಿಸಿಸಲು ಸಹಾಯ ನೀಡಿ ಗ್ರಾಮೀಣ ಭಾಗದಲ್ಲಿ **ಉದ್ಯೋಗ ಸೃಜನೆ** ಮಾಡುವುದು.
3. ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ಹಾಗೂ ಇತರೆ ಸಂಶೋದನಾ ಸಂಸ್ಥೆಗಳಲ್ಲಿ ಅಭಿವೃದ್ಧಿಪಡಿಸಲಾದ ನೂತನ ಆವಿಷ್ಕಾರಗಳು ಹಾಗೂ ತಾಂತ್ರಿಕತೆಗಳ **ವಾಣಿಜ್ಯೀಕರಣವನ್ನು** ಉತ್ತೇಜಿಸುವುದು.

**II. ಆಯವ್ಯಯ:** 2023-24ನೇ ಸಾಲಿನ ಆಯವ್ಯಯದಲ್ಲಿ ಕೃಷಿ ನವೋದ್ಯಮ ಯೋಜನೆಗೆ ರೂ. 10.00 ಕೋಟಿ ಅನುದಾನವನ್ನು ಜಲಾನಯನ ಅಭಿವೃದ್ಧಿ ಇಲಾಖೆಯ ಲೆಕ್ಕ ಶೀರ್ಷಿಕೆ: 2401-00-195-0-01 , ಉಪ ಶೀರ್ಷಿಕೆ- 106ರಲ್ಲಿ ನಿಗದಿಪಡಿಸಲಾಗಿದೆ.

**III. ಯೋಜನೆಯ ಕಾರ್ಯವ್ಯಾಪ್ತಿ:** 2023-24ನೇ ಸಾಲಿನಲ್ಲಿ ರೈತರ ನೂತನ ಪರಿಕಲ್ಪನೆಗಳಿಗೆ ಉತ್ತೇಜನ ನೀಡಿ ಕೃಷಿಯೊಂದಿಗೆ ಉದ್ಯಮಿಗಳಾಗಿ ಪರಿವರ್ತನೆ ಹೊಂದುವಂತೆ ಹಾಗೂ ರೈತರ ಆದಾಯ ವೃದ್ಧಿಸುವಲ್ಲಿ ಸಹಕಾರಿಯಾಗುವಂತೆ ರಾಜ್ಯಾದ್ಯಂತ ಕೃಷಿ ವಲಯದಲ್ಲಿ ನೂತನ ಆವಿಷ್ಕಾರಗಳು, ನವೀನ ಉತ್ಪನ್ನಗಳು ಹಾಗೂ ಸೇವೆಗಳನ್ನು ಒಳಗೊಂಡಿರುವ ಕೃಷಿ ನವೋದ್ಯಮಗಳಿಗೆ ಉತ್ತೇಜನ ನೀಡಲಾಗುವುದು.

**ಯೋಜನೆಯ ಘಟಕಗಳು:**

ಯೋಜನೆಯು ಈ ಕೆಳಕಂಡಂತೆ 3 ಪ್ರಮುಖ ಘಟಕಗಳನ್ನು ಒಳಗೊಂಡಿರುತ್ತದೆ.

A. **ಹೊಸ ಕೃಷಿ ನವೋದ್ಯಮಗಳಿಗೆ (Startups at Incubation Stage)ಆರ್ಥಿಕನೆರವು**: ಕೃಷಿ ಕ್ಷೇತ್ರದಲ್ಲಿ ನೂತನ ಪರಿಕಲ್ಪನೆಯೊಂದಿಗೆ ಆರಂಭಿಸುವ ಹೊಸ ಕೃಷಿ ನವೋದ್ಯಮಿಗಳಿಗೆ ಅನುಮೋದಿತ ಯೋಜನಾ ವರದಿಯ ಶೇಕಡ 50 ರಷ್ಟು ಸಹಾಯಧನವನ್ನು (ಕನಿಷ್ಟ-**ರೂ. 5.00 ಲಕ್ಷದಿಂದ ಗರಿಷ್ಟರೂ. 20 ಲಕ್ಷ**ಗಳವರೆಗೆ) ಬ್ಯಾಂಕ್ ಸಾಲದ ಮುಖಾಂತರ(**Backended subsidy**) ನೀಡಲಾಗುವುದು.

B. **ಈಗಾಗಲೇ ಸ್ಥಾಪಿಸಲಾದ ನವೋದ್ಯಮಗಳ ವಿಸ್ತರಣೆ ಅಥವಾ ಮೇಲ್ದರ್ಜೆಗೇರಿಸಲು (Scale up of business/Expansion of established Startups) ಆರ್ಥಿಕ ನೆರವು:**ಕೃಷಿ ವಲಯದಲ್ಲಿ ಈಗಾಗಲೇ ಸ್ಥಾಪಿಸಲಾದ ನವೋದ್ಯಮಗಳ ವಿಸ್ತರಣೆಗಾಗಿ ಹಾಗೂ ಉನ್ನತೀಕರಣಕ್ಕಾಗಿ ಯೋಜನಾ ವರದಿಯ ಶೇಕಡ 50 ರಷ್ಟು ಸಹಾಯಧನವನ್ನು (**ಕನಿಷ್ಟ- ರೂ. 20 ಲಕ್ಷದಿಂದ ಗರಿಷ್ಟರೂ. 50 ಲಕ್ಷ**ಗಳವರೆಗೆ) ಕೃಷಿವಲಯದ ನವೋದ್ಯಮಿಗಳಿಗೆ ಬ್ಯಾಂಕ್ ಸಾಲದ ಮುಖಾಂತರ **(Backended subsidy**) ನೀಡಲಾಗುವುದು.

C. **ಕೃಷಿ ನವೋದ್ಯಮಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ (Mentoring and Acceleration Programme –MAP)**:ಆಯ್ಕೆಯಾದ ನವೋದ್ಯಮಿಗಳ ಸಾಮರ್ಥ್ಯಾಭಿವೃದ್ಧಿಗೆ ಕೃಷಿ ವಿಶ್ವವಿದ್ಯಾಲಯ, ICAR, CFTRI, CSIR,C- CAMP, ಹಾಗೂ ಇತರೆ ಸಂಶೋದನಾ ಸಂಸ್ಥೆಗಳಾದ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಸ್ಥಾಪಿತವಾಗಿರುವ ಕೃಷಿ ನಾವೀನ್ಯತೆಗಾಗಿ ಶ್ರೇಷ್ಠತೆಯ

ಕೇಂದ್ರಗಳ ಮೂಲಕ ತರಬೇತಿಗಳನ್ನು ನೀಡಲಾಗುವುದು. ಸದರಿ ಕಾರ್ಯಕ್ರಮಕ್ಕಾಗಿ ಪ್ರತ್ಯೇಕವಾಗಿ **ರೂ. 20.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿದ್ದು, ಕೃಷಿ ನವೋದ್ಯಮಿಗಳಿಗೆ ತರಬೇತಿ ನೀಡುವ ಸಂಸ್ಥೆಗಳಿಗೆ ತರಬೇತಿ ಶುಲ್ಕವನ್ನು ಪಾವತಿಸಲಾಗುವುದು.

## IV.ಸಮಿತಿಗಳು ಹಾಗೂ ಜವಾಬ್ದಾರಿಗಳು:

### 1. ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ:

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ವಿವಿಧ ಸಂಬಂಧಿತ ಇಲಾಖೆಗಳನ್ನು ಪ್ರತಿನಿಧಿಸುವ ಅಧಿಕಾರಿಗಳು ಸದಸ್ಯರಾಗಿದ್ದು ಸಹಾಯ ಕೃಷಿ ನಿರ್ದೇಶಕರು (ವಿಷಯ ತಜ್ಞ) ರವರು ಸದಸ್ಯ ಕಾರ್ಯದರ್ಶಿಯವರಾಗಿರುವ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯು ಈ ಕೆಳಕಂಡಂತಿದೆ.

| ಕ್ರ.ಸಂ | ಪದನಾಮ | ಸ್ಥಾನ |
|---|---|---|
| 1. | ಜಂಟಿ ಕೃಷಿ ನಿರ್ದೇಶಕರು | ಅಧ್ಯಕ್ಷರು |
| 2. | ಕೃಷಿ ವಿಜ್ಞಾನ ಕೇಂದ್ರದ ಸಂಯೋಜಕರು ಅಥವಾ ಸಂಬಂಧಿಸಿದ ವಿಜ್ಞಾನಿಗಳು | ಸದಸ್ಯರು |
| 3. | ಉಪ ನಿರ್ದೇಶಕರು(ಪಶು ಸಂಗೋಪನೆ) | ಸದಸ್ಯರು |
| 4. | ಉಪ ನಿರ್ದೇಶಕರು (ತೋಟಗಾರಿಕೆ) | ಸದಸ್ಯರು |
| 5. | ಉಪ ನಿರ್ದೇಶಕರು (ರೇಷ್ಮೆ) | ಸದಸ್ಯರು |
| 6. | ಉಪ ನಿರ್ದೇಶಕರು (ಮೀನುಗಾರಿಕೆ) | ಸದಸ್ಯರು |
| 7. | ಪ್ರಸ್ತಾಪಿಸಿದ ಯೋಜನಾ ವರದಿಯ ಸಂಬಂಧಿತ ಜಿಲ್ಲಾ ಮಟ್ಟದ ಅಧಿಕಾರಿಗಳು | ಸದಸ್ಯರು |
| 8 | ಸಹಾಯಕ ಕೃಷಿ ನಿರ್ದೇಶಕರು (ವಿ.ತ) | ಸಂಚಾಲಕರು |

**ಸಮಿತಿಯಲ್ಲಿ ಪರಿಶೀಲಿಸಬೇಕಾದ ಮುಖ್ಯ ಅಂಶಗಳು :**

1. ಕೃಷಿವಲಯದಡಿ ಸ್ವೀಕೃತವಾದ ಎಲ್ಲಾ ನವೋದ್ಯಮಗಳ ಅರ್ಜಿಗಳನ್ನು ಮಾರ್ಗಸೂಚಿಯನ್ವಯ ಪರಿಶೀಲಿಸುವುದು.
2. ಕೃಷಿ ನವೋದ್ಯಮಗಳು ಸಲ್ಲಿಸಿರುವ ಅರ್ಜಿಯು **Start-up** ಪರಿಮಿತಿಯಲ್ಲಿರುವುದನ್ನು ಖಾತರಿ ಪಡಿಸಿಕೊಳ್ಳುವುದು. (ನೋಂದಣಿ, ವ್ಯವಹಾರ ಗಳಿಕೆ, ಆರಂಭಿಕ ವರ್ಷ ಇತ್ಯಾದಿ)
3. ರೈತರು ಕೃಷಿಯೊಂದಿಗೆ ಇತರೆ ಪೂರಕ ಉಪಕಸುಬುಗಳಲ್ಲಿ ತೊಡಗಿಸಿಕೊಂಡು ಉದ್ಯಮಿಗಳಾಗಿ ಪರಿವರ್ತನೆ ಹೊಂದಲು ಉತ್ತೇಜನ ನೀಡುವ ಸಲುವಾಗಿ **ರೈತರಿಂದ ಪ್ರಾರಂಭಿಸಲಾದ ಕೃಷಿ ನವೋದ್ಯಮಗಳಿಗೆ ಪ್ರಥಮ ಆದ್ಯತೆ ನೀಡುವುದು**.
4. **ಸ್ಥಳ ಪರಿಶೀಲನೆ:** ಸಂಬಂಧಿಸಿದ ಇಲಾಖಾಧಿಕಾರಿಗಳು ಅರ್ಜಿ ಸಲ್ಲಿಸುವ Agri-Startup ಗಳ ಸ್ಥಳ ಪರಿಶೀಲನೆ ಕೈಗೊಂಡು ಸ್ಥಳ ಸೂಕ್ತತೆ ಕುರಿತು ದೃಢೀಕರಿಸುವುದು.
5. ಇತರೆ ಇಲಾಖೆಯಲ್ಲಿ/ ಯೋಜನೆಗಳಡಿ ಈಗಾಗಲೇ ಸಹಾಯಧನದ ಪುನರಾವರ್ತನೆ (Duplicate) ಕುರಿತು ಪರಿಶೀಲನೆ.
6. ಸದರಿ ನಾವೀನ್ಯತೆಯ ಕಾರ್ಯಸಾಧ್ಯತೆ (Feasibility/Viability), ವಿಭಿನ್ನತೆ, ವ್ಯವಹಾರ ಮಾದರಿ, ಮಾರುಕಟ್ಟೆ ಸಾಮರ್ಥ್ಯ, ಕಾರ್ಯನಿರ್ವಹಣಾ ತಂಡದ

ಸಾಮರ್ಥ್ಯ ಇತ್ಯಾದಿಗಳನ್ನು **ನಮೂನೆ-1ರನ್ವಯ** ಪರಿಶೀಲನೆ ನಡೆಸಿ ಅಂಕಗಳನ್ನು ನೀಡುವುದು.

7. ಆಯ್ಕೆಯಾದ ಅರ್ಹ ಅರ್ಜಿಗಳನ್ನು ಶಿಫಾರಸ್ಸಿನೊಂದಿಗೆ ಜಿಲ್ಲಾ ಮಟ್ಟದ ಚಾಲನಾ ಸಮಿತಿಗೆ ಸಲ್ಲಿಸುವುದು.

**ಜವಾಬ್ದಾರಿಗಳು**:

- ಜಿಲ್ಲಾ ಮಟ್ಟದಲ್ಲಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಕೂಲಂಕಷವಾಗಿ ನಿಯಮಾನುಸಾರ ಪರಿಶೀಲಿಸುವುದು.
- ಪ್ರಾಥಮಿಕ ಹಂತದ ಪರಿಶೀಲನೆ ನಂತರ ಅರ್ಹ ಅರ್ಜಿಗಳನ್ನು (ನಮೂನೆ-1 ಅಂಕಗಳನ್ವಯ) ಜಿಲ್ಲಾ ಮಟ್ಟದ ಚಾಲನಾ ಸಮಿತಿಗೆ ಸಲ್ಲಿಸುವುದು.
- ಆರ್ಥಿಕ ನೆರವನ್ನು ಒದಗಿಸಲು ಪೂರಕವಾದ ದಾಖಲೆಗಳನ್ನು ಕೃಷಿ ನವೋದ್ಯಮಗಳಿಂದ ಪಡೆದು ರಾಜ್ಯ ಮಟ್ಟದ ಅನುಮೋದನಾ ಸಮಿತಿಗೆ ಸಹಾಯಧನ ಬಿಡುಗಡೆಗೆ ಸಲ್ಲಿಸಲು ಕ್ರಮವಹಿಸುವುದು.
- ಕೃಷಿ ನವೋದ್ಯಮಗಳ ಅಂತಿಮ ಆಯ್ಕೆಯ ನಂತರ ಸದರಿ ನವೋದ್ಯಮಗಳ ಕಾರ್ಯನಿರ್ವಹಣೆ ಕುರಿತು ಆಗಿಂದಾಗ್ಗೆ ಪರಿಶೀಲಿಸುವುದು.
- ನಿಗಧಿತ ಸಮಯದಲ್ಲಿ ಹಣ ಬಳಕೆ ಪ್ರಮಾಣ ಪತ್ರವನ್ನು ನಮೂನೆ-2 ರನ್ವಯ ಆಯ್ಕೆಯಾದ ಕೃಷಿ ನವೋದ್ಯಮಗಳಿಂದ ಪಡೆದು ರಾಜ್ಯ ಮಟ್ಟದ ಅನುಮೋದನಾ ಸಮಿತಿಗೆ ಸಲ್ಲಿಸುವುದು.

**2. ಜಿಲ್ಲಾ ಮಟ್ಟದ ಚಾಲನಾ ಸಮಿತಿ:**

ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ಪರಿಣಿತರು ಹಾಗೂ ವಿಷಯ ತಜ್ಞರನ್ನೊಳಗೊಂಡಂತೆ ಸಮಿತಿಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯವರಾಗಿರುವ ಜಿಲ್ಲಾ ಮಟ್ಟದ ಚಾಲನಾ ಸಮಿತಿಯು ಈ ಕೆಳಕಂಡಂತಿದೆ.

| ಕ್ರ.ಸಂ | ಪದನಾಮ | ಸ್ಥಾನ |
|---|---|---|
| 1. | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2. | ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು |
| 3. | ಜಂಟಿ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿಗಳು |
| 4. | ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 5. | ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ | ಸದಸ್ಯರು |
| 6. | ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ | ಸದಸ್ಯರು |
| 7 | ಉಪ ನಿರ್ದೇಶಕರು, ರೇಷ್ಮೆ ಇಲಾಖೆ | ಸದಸ್ಯರು |
| 8 | ಸಹಾಯಕ /ಉಪ ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ | ಸದಸ್ಯರು |
| 9 | ವ್ಯವಸ್ಥಾಪಕರು, ಲೀಡ್ ಬ್ಯಾಂಕ್ | ಸದಸ್ಯರು |

| | | |
|---|---|---|
| 8 | ಸಹಾಯಕ /ಉಪ ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ | ಸದಸ್ಯರು |
| 9 | ವ್ಯವಸ್ಥಾಪಕರು, ಲೀಡ್ ಬ್ಯಾಂಕ್ | ಸದಸ್ಯರು |
| 10 | Start-upವಲಯದ ಪರಿಣಿತರು/ ಅನುಭವಿ ವಿಷಯ ತಜ್ಞರು (ಸರ್ಕಾರಿ/ ಸರ್ಕಾರೇತರ - ಜಿಲ್ಲೆಯಲ್ಲಿ ಅವಶ್ಯಕತೆಗನುಗುಣವಾಗಿ ನೇಮಕ ಮಾಡಿಕೊಳ್ಳುವುದು) | ಸದಸ್ಯರು |

**ಪರಿಶೀಲಿಸಬೇಕಾದ ಮುಖ್ಯ ಅಂಶಗಳು** :

1. **ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯಲ್ಲಿ** ಆಯ್ಕೆಯಾದ ಅರ್ಹ ಕೃಷಿ ನವೋದ್ಯಮದ ನಾವೀನ್ಯತೆ, ಮಾರುಕಟ್ಟೆ, ವಿಭಿನ್ನತೆ, ವ್ಯವಹಾರ ಮಾದರಿ, ಮಾರುಕಟ್ಟೆ ಸಾಮರ್ಥ್ಯ, ಆರ್ಥಿಕತೆ, ಕಾರ್ಯನಿರ್ವಹಣಾ ತಂಡದ ಸಾಮರ್ಥ್ಯ ಹಾಗೂ ಕಾರ್ಯಸಾಧ್ಯತೆ ಕುರಿತು ಪರಾಮರ್ಶಿಸುವುದು.
2. ಸ್ವೀಕೃತವಾದ ಅರ್ಹ ಅರ್ಜಿಗಳ ಸಂಖ್ಯೆ ಹೆಚ್ಚಿದ್ದಲ್ಲಿ ಮೇಲಿನ ಮಾನದಂಡಗಳನ್ವಯ ಹಾಗೂ ನಮೂನೆ-1 ರಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಅರ್ಹ ಕೃಷಿ ನವೋದ್ಯಮಗಳನ್ನು ಆಯ್ಕೆ ಮಾಡುವುದು. ಒಂದು ವೇಳೆ ಒಂದಕ್ಕಿಂತ ಹೆಚ್ಚು ಕೃಷಿ ನವೋದ್ಯಮಗಳು ಸಮಾನ ಅಂಕ ಗಳಿಸಿದ್ದಲ್ಲಿ ಲಾಟರಿ ಪ್ರಕ್ರಿಯೆ ಮೂಲಕ ಕೃಷಿ ನವೋದ್ಯಮಗಳನ್ನು ಆಯ್ಕೆ ಮಾಡುವುದು.
3. ಆಯ್ಕೆ ಮಾಡಿದ ಕೃಷಿ ನವೋದ್ಯಮಗಳ ಪಟ್ಟಿಯನ್ನು**ರಾಜ್ಯ ಮಟ್ಟದ ಅನುಮೋದನಾ ಸಮಿತಿಗೆ** ಅಂತಿಮ ಅನುಮೋದನೆಗಾಗಿ ಸಲ್ಲಿಸುವುದು.

**ಜವಾಬ್ದಾರಿಗಳು**:

- ಅರ್ಜಿ ಸಲ್ಲಿಸಿದ ಕೃಷಿ ನವೋದ್ಯಮಗಳ ನಾವೀನ್ಯತೆ, ಮಾರುಕಟ್ಟೆ, ವಿಭಿನ್ನತೆ, ವ್ಯವಹಾರ ಮಾದರಿ, ಮಾರುಕಟ್ಟೆ ಸಾಮರ್ಥ್ಯ, ಆರ್ಥಿಕತೆ, ಕಾರ್ಯನಿರ್ವಹಣಾ ತಂಡದ ಸಾಮರ್ಥ್ಯ ಹಾಗೂ ಕಾರ್ಯಸಾಧ್ಯತೆ ಕುರಿತು ಪರಾಮರ್ಶಿಸುವುದು.
- ಕೃಷಿ ನವೋದ್ಯಮಗಳ ಆಯ್ಕೆಗಾಗಿ ಸಮಿತಿಗೆ ಅಗತ್ಯವಿರುವ ಪರಿಣಿತರು/ ವಿಷಯ ತಜ್ಞರನ್ನು ಗುರುತಿಸಿ, ಅಧ್ಯಕ್ಷರ ಅನುಮೋದನೆ ಪಡೆದು ನೇಮಕ ಮಾಡಿಕೊಳ್ಳುವುದು.
- ಆಗಿಂದಾಗ್ಗೆ ಯೋಜನೆಯ ಅನುಷ್ಠಾನದ ಪ್ರಗತಿ ಪರಿಶೀಲನೆಯ ಮೇಲ್ವಿಚಾರಣೆ ಮಾಡುವುದು.
- ಆಯ್ಕೆಯಾದ ಕೃಷಿ ನವೋದ್ಯಮಗಳ ಕಾರ್ಯನಿರ್ವಹಣೆ, ಪ್ರಗತಿ ಕುರಿತು ಆಗಿಂದಾಗ್ಗೆ ವರದಿ ಪಡೆದು ನಿಗಧಿತ ಗುರಿ ಸಾಧಿಸಿರುವ ಕುರಿತು ಪರಿಶೀಲಿಸುವುದು.
- ನಿಗದಿತ ಸಮಯದಲ್ಲಿ ಹಣ ಬಳಕೆ ಪ್ರಮಾಣ ಪತ್ರವನ್ನು ಆಯ್ಕೆಯಾದ ಕೃಷಿ ನವೋದ್ಯಮಗಳು ಸಲ್ಲಿಸಿರುವ ಕುರಿತು ಪರಿಶೀಲಿಸುವುದು.
- ಜಿಲ್ಲಾ ಮತ್ತು ರಾಜ್ಯ ಮಟ್ಟದ ನಡುವೆ ಪರಿಣಾಮಕಾರಿ ಸಮನ್ವಯವನ್ನು ಸಾಧಿಸುವುದು.

4. **ರಾಜ್ಯಮಟ್ಟದ ಅನುಮೋದನಾ ಸಮಿತಿ:** ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ಪರಿಣಿತರು ಹಾಗೂ ವಿಷಯ ತಜ್ಞರನ್ನೊಳಗೊಂಡಂತಹ, ಕೃಷಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯವರಾಗಿರುವ **ರಾಜ್ಯ ಮಟ್ಟದ ಅನುಮೋದನಾ ಸಮಿತಿಯು** ಈ ಕೆಳಕಂಡಂತಿದೆ.

| ಕ್ರ ಸಂ | ಪದನಾಮ | ಹುದ್ದೆ |
|---|---|---|
| 1. | ಕೃಷಿ ಆಯುಕ್ತರು, ಕೃಷಿ ಇಲಾಖೆ | ಅಧ್ಯಕ್ಷರು |
| 2. | ನಿರ್ದೇಶಕರು, ತೋಟಗಾರಿಕೆಇಲಾಖೆ | ಸದಸ್ಯರು |
| 3. | ರೇಷ್ಮೆಅಭಿವೃದ್ಧಿಆಯುಕ್ತರು&ನಿರ್ದೇಶಕರು, ರೇಷ್ಮೆ ಇಲಾಖೆ | ಸದಸ್ಯರು |
| 4. | ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪಶುಸಂಗೋಪನೆ & ಪಶು ವೈದ್ಯಕೀಯ ಇಲಾಖೆ | ಸದಸ್ಯರು |
| 6. | ನಿರ್ದೇಶಕರು, ಮೀನುಗಾರಿಕೆಇಲಾಖೆ | ಸದಸ್ಯರು |
| 7. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕಇನ್ನೋವೇಶನ್ಮತ್ತುಟೆಕ್ನಾಲಜಿಸೊಸೈಟಿ (ಕಿಟ್ಸ್) | ಸದಸ್ಯರು |
| 8. | ಕೃಷಿ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

**ಪರಿಶೀಲಿಸಬೇಕಾದ ಮುಖ್ಯ ಅಂಶಗಳು :**

1. ಜಿಲ್ಲಾ ಮಟ್ಟದ ಚಾಲನಾ ಸಮಿತಿಯಲ್ಲಿ ಆಯ್ಕೆಯಾದ ಕೃಷಿ ನವೋದ್ಯಮಗಳನ್ನು ಪರಿಶೀಲಿಸಿ, ಪಟ್ಟಿಯನ್ನು ಅಂತಿಮಗೊಳಿಸುವುದು.
2. ಅಂತಿಮಗೊಳಿಸಲಾದ ಕೃಷಿ ನವೋದ್ಯಗಳಿಗೆ ನಿರ್ದಿಷ್ಟ ಸಮಯದಲ್ಲಿ ಸಾಧಿಸಲು ಪೂರ್ವ ನಿರ್ಧಾರಿತ ಮೈಲಿಗಲ್ಲುಗಳನ್ನು ಗುರುತಿಸುವುದು.
3. ಅಂತಹ ಪ್ರತಿ ಪೂರ್ವ ನಿರ್ಧಾರಿತ ಮೈಲಿಗಲ್ಲುಗಳನ್ನು ಸಾಧಿಸಲು ಆರ್ಥಿಕ ನೆರವನ್ನು ಅಂತಿಮಗೊಳಿಸಲಾದ ಕೃಷಿ ನವೋದ್ಯಗಳಿಗೆ ನೀಡುವುದು.
4. ಆಯ್ಕೆಯಾದ ನವೋದ್ಯಮಿಗಳ ಸಾಮರ್ಥ್ಯಾಭಿವೃದ್ಧಿಗೆ **Mentoring and Acceleration Programme –MAP** ಅನ್ನು ಕೃಷಿ ವಿಶ್ವವಿದ್ಯಾಲಯ, ICAR, CFTRI, CSIR, C-CAMPಹಾಗೂ ಇತರೆ ಸಂಶೋದನಾ ಸಂಸ್ಥೆಗಳಾದವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಸ್ಥಾಪಿತವಾಗಿರುವ ಕೃಷಿ ನಾವೀನ್ಯತೆಗಾಗಿ ಶ್ರೇಷ್ಠತೆಯ ಕೇಂದ್ರಗಳ ಮೂಲಕ ತರಬೇತಿಗಳನ್ನು ನೀಡುವುದು. ತದನಂತರ ತರಬೇತಿ ಒದಗಿಸಿದ ಸಂಸ್ಥೆಗಳಿಗೆ ತರಬೇತಿ ಶುಲ್ಕವನ್ನು ಪಾವತಿ ಮಾಡುವುದು.

**ಜವಾಬ್ದಾರಿಗಳು:**

- ಅಂತಿಮಗೊಳಿಸಿದ ಕೃಷಿ ನವೋದ್ಯಮಗಳಿಗೆ ಆರ್ಥಿಕ ನೆರವನ್ನು **ಬ್ಯಾಂಕ್ ಸಾಲದ ಮುಖಾಂತರ** ನೀಡುವುದರ ಕುರಿತು ಪರಿಶೀಲಿಸುವುದು.
- ಜಿಲ್ಲೆಗಳಲ್ಲಿ ಕಾರ್ಯಕ್ರಮ ಅನುಷ್ಠಾನದ ಕುರಿತು ಪ್ರಗತಿ ಪರಿಶೀಲನೆ ಹಾಗೂ ಮೇಲ್ವಿಚಾರಣೆ ಕೈಗೊಳ್ಳುವುದು.
- ಆಯ್ಕೆಯಾದ ಕೃಷಿ ನವೋದ್ಯಮಗಳ ಕಾರ್ಯನಿರ್ವಹಣೆ, ಪ್ರಗತಿ ಕುರಿತು ಆಗಿಂದಾಗ್ಗೆ ವರದಿ, ಅನುದಾನದ ಹಣ ಬಳಕೆ ಪ್ರಮಾಣ ಪತ್ರ ಪಡೆದು ನಿಗಧಿತ ಗುರಿ ಸಾಧಿಸಿರುವ ಕುರಿತು ಪರಿಶೀಲಿಸುವುದು.

## V. ಕಾರ್ಯಕ್ರಮ ಅನುಷ್ಠಾನಗೊಳಿಸುವ ವಿಧಾನ:

1. **ಪ್ರಚಾರ**: ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯದ ಎಲ್ಲಾ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳಲ್ಲಿ ಸದರಿ ಕಾರ್ಯಕ್ರಮದ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳುವುದು.

2. **ನೋಂದಣಿ ಹಾಗೂ ಅರ್ಜಿ ಸಲ್ಲಿಸುವಿಕೆ:** ರಾಜ್ಯಾದ್ಯಂತ ಕೃಷಿ ವಲಯದಲ್ಲಿ ನೂತನ ಆವಿಷ್ಕಾರಗಳು, ನವೀನ ಉತ್ಪನ್ನಗಳು ಹಾಗೂ ಸೇವೆಗಳನ್ನು ಒಳಗೊಂಡಿರುವ ಕೃಷಿ ನವೋದ್ಯಮಗಳಿಗೆಉತ್ತೇಜನ ನೀಡುವ ಉದ್ದೇಶದೊಂದಿಗೆ ಸದರಿ ಯೋಜನೆಯನ್ನು ರೂಪಿಸಲಾಗಿರುತ್ತದೆ.

   ಕೃಷಿ ವಲಯದಲ್ಲಿ ನವೋದ್ಯಮ ಕೈಗೊಳ್ಳುವ ಹೊಸ ಕೃಷಿ ನವೋದ್ಯಮಿಗಳಿಗೆ (Startups at incubation stage) ಹಾಗೂ ಈಗಾಗಲೇ ಸ್ಥಾಪಿಸಲಾದ ಕೃಷಿ ನವೋದ್ಯಮಗಳ ವಿಸ್ತರಣೆ/ ಉನ್ನತೀಕರಣಕ್ಕಾಗಿ (Scaling up business)ಆರ್ಥಿಕ ನೆರವು ಒದಗಿಸಲು ಕೃಷಿ ಇಲಾಖೆವತಿಯಿಂದ ಅಭಿವೃದ್ಧಿಪಡಿಸಲಾದ K-kisan webpage ಮುಖಾಂತರ ಅರ್ಜಿಗಳನ್ನು online ಮೂಲಕ ಜಿಲ್ಲಾ ಮಟ್ಟದಲ್ಲಿ ಆಹ್ವಾನಿಸಲಾಗುವುದು.

3. **ಅರ್ಜಿ ಪರಿಶೀಲನೆ ಮತ್ತು ಫಲಾನುಭವಿ ಆಯ್ಕೆ**:ಸದರಿ ಪ್ರಕ್ರಿಯೆಯು ಮೂರು ಹಂತಗಳನ್ನು ಒಳಗೊಂಡಿದೆ.

**3.1 ಪ್ರಾಥಮಿಕ ಹಂತ**: ಪ್ರಾಥಮಿಕ ಹಂತದಲ್ಲಿ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ **ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯಲ್ಲಿ** ಅರ್ಜಿಗಳನ್ನು ಈ ಕೆಳಗಿನಂತೆ ಪರಿಶೀಲಿಸಲಾಗುವುದು.

❖ ಕೃಷಿ ನವೋದ್ಯಮಗಳು ಸಲ್ಲಿಸಿದ ಅರ್ಜಿಯು Agri Start-up ಪರಿಮಿತಿಯಲ್ಲಿರುವುದನ್ನು ಈ ಕೆಳಗಿನ ಷರತ್ತುಗಳನ್ವಯ ಖಾತರಿ ಪಡಿಸಿಕೊಳ್ಳುವುದು.

- **Agri- Startup ನೋಂದಣಿ**: ಅರ್ಜಿ ಸಲ್ಲಿಸುವ Agri- Startup ಗಳು Private Limited company (Companies Act, 2013) ಅಥವಾ Partnership Firm (registered under section 59 of the Partnership Act, 1932) ಅಥವಾ Limited Liability Partnership (the Limited Liability Partnership Act, 2008)ನಡಿ ಕಡ್ಡಾಯವಾಗಿ ಕರ್ನಾಟಕದಲ್ಲಿ ನೋಂದಣಿಯಾಗಿರಬೇಕು.

- **ವ್ಯವಹಾರ ಗಳಿಕೆ (Turnover)** :ನೋಂದಣಿಯಿಂದ ಇಲ್ಲಿಯವರೆಗೆ ಯಾವುದೇ ಆರ್ಥಿಕ ವರ್ಷದಲ್ಲಿ ವ್ಯವಹಾರ ಗಳಿಕೆಯು ರೂ. 5.00ಕೋಟಿ ಮೀರುವಂತಿಲ್ಲ.

- **ವರ್ಷಾವಧಿ**: ಯಾವುದೇ Agri- Startup ನೋಂದಣಿಯಿಂದ ಇಲ್ಲಿಯವರೆಗೆ 3ವರ್ಷ ಮೀರಿರುವಂತಿಲ್ಲ.

- **ಕಾರ್ಯವೈಖರಿ:**Agri- Startup ಗಳು ಕೃಷಿ ವಲಯಕ್ಕೆ ಸಂಬಂಧಿಸಿದ್ದಾಗಿದ್ದು ನೂತನ ಆವಿಷ್ಕಾರಗಳು, ಉಪಯೋಗಕಾರಿ ಉತ್ಪನ್ನಗಳು ಹಾಗೂ ಸೇವೆಗಳನ್ನು ಒಳಗೊಂಡಿದ್ದು ಉದ್ಯೋಗ ಸೃಜನೆ ಸಾಮರ್ಥ್ಯ ಹೊಂದಿರಬೇಕು.

- ರೈತರು ಕೃಷಿಯೊಂದಿಗೆ ಇತರೆ ಪೂರಕ ಉಪಕಸುಬುಗಳಲ್ಲಿ ತೊಡಗಿಸಿಕೊಂಡು ಉದ್ಯಮಿಗಳಾಗಿ ಪರಿವರ್ತನೆ ಹೊಂದಲು ಉತ್ತೇಜನ ನೀಡುವ ಸಲುವಾಗಿ ರೈತರೇ ಪ್ರಾರಂಭಿಸಿರುವ ಕೃಷಿ ನವೋದ್ಯಮಗಳಿಗೆ ಪ್ರಥಮ ಆದ್ಯತೆ ನೀಡುವುದು.
- **ಸ್ಥಳ ಪರಿಶೀಲನೆ**: ಸಂಬಂಧಿಸಿದ ಇಲಾಖಾಧಿಕಾರಿಗಳು ಅರ್ಜಿ ಸಲ್ಲಿಸುವ Agri- Startup ಗಳ ಸ್ಥಳ ಪರಿಶೀಲನೆ ಕೈಗೊಂಡು ಸ್ಥಳ ಸೂಕ್ತತೆ ಕುರಿತು ದೃಢೀಕರಿಸುವುದು.

- ಇತರೆ ಇಲಾಖೆಯಲ್ಲಿ/ ಯೋಜನೆಗಳಡಿ ಈಗಾಗಲೇ ಸಹಾಯಧನದ ಪುನರಾವರ್ತನೆ (Duplicate) ಆಗದಿರುವಂತೆ ಪರಿಶೀಲಿಸುವುದು

- ಸದರಿ ನಾವೀನ್ಯತೆಯ ಕಾರ್ಯಸಾಧ್ಯತೆ (Feasibility/Viability), ವಿಭಿನ್ನತೆ, ವ್ಯವಹಾರ ಮಾದರಿ, ಮಾರುಕಟ್ಟೆ ಸಾಮರ್ಥ್ಯ, ಆರ್ಥಿಕತೆ, ಕಾರ್ಯನಿರ್ವಹಣಾ ತಂಡದ ಸಾಮರ್ಥ್ಯ ಇತ್ಯಾದಿಗಳ ಕುರಿತು ಅರ್ಜಿ ಸಲ್ಲಿಸಿದ ಕೃಷಿ ನವೋದ್ಯಮಗಳು ಪ್ರಸ್ತುತಪಡಿಸಿ,ಈ ಕೆಳಗಿನ ನಮೂನೆಯನ್ವಯ ಪರಿಶೀಲನೆ ನಡೆಸಿ ಅಂಕಗಳನ್ನು ನೀಡುವುದು.
- ಆಯ್ಕೆಯಾಗಲು ಕೃಷಿ ನವೋದ್ಯಮಗಳು ಕನಿಷ್ಟ 60 ಅಂಕಗಳ ಅರ್ಹತೆ ಪಡೆಯಬೇಕು

**ನಮೂನೆ-1**

| ಕ್ರ ಸಂ | ಆಯ್ಕೆ ಮಾನದಂಡ | ವಿವರ | ಗರಿಷ್ಟ ಅಂಕ |
|---|---|---|---|
| 1. | ಕೃಷಿ ನವೋದ್ಯಮದ ಅವಶ್ಯಕತೆ | ಮಾರುಕಟ್ಟೆಯಗಾತ್ರ, ಸಾಮರ್ಥ್ಯ, ಸದರಿ ಕೃಷಿ ನವೋದ್ಯಮ ಪರಿಹರಿಸಬಹುದಾದ ಸಮಸ್ಯೆ, ಸುಸ್ಥಿರ ಅಭಿವೃದ್ಧಿ ಗುರಿ, ಉದ್ದೇಶ ಇತ್ಯಾದಿ | 10 |
| 2. | ಕಾರ್ಯಸಾಧ್ಯತೆ | ನಾವೀನ್ಯತೆಯ ಕಾರ್ಯಸಾಧ್ಯತೆ, ಬಳಸುವ ತಾಂತ್ರಿಕತೆ/ ಪದ್ಧತಿ, ಮಾನ್ಯತೆ ಹಾಗೂ ಉತ್ಪನ್ನಗಳ ಅಭಿವೃದ್ಧಿಯ ಮಾರ್ಗಸೂಚಿ | 20 |
| 3. | ಸಂಭವನೀಯ ಪರಿಣಾಮ | ಗ್ರಾಹಕರ ಸಂಖ್ಯೆ, ಉತ್ಪನ್ನಗಳ ಪ್ರತ್ಯಕ್ಷ ಹಾಗೂ ಪರೋಕ್ಷ ಬಳಕೆ, ತಾಂತ್ರಿಕ ಪರಿಣಾಮ ಹಾಗೂ ಪ್ರಾಮುಖ್ಯತೆ | 20 |
| 4 | ನಾವೀನ್ಯತೆ | ತಂತ್ರಜ್ಞಾನದ ಅನನ್ಯ ಮಾರಾಟ ಬಿಂದು (USP), Patent ಇತ್ಯಾದಿ | 10 |
| 5 | ಕಾರ್ಯ ತಂಡ | ತಂಡದ ಸಾಮರ್ಥ್ಯ, ತಾಂತ್ರಿಕ, ಆರ್ಥಿಕ ಹಾಗೂ ವ್ಯವಹಾರ ಪರಿಣಿತಿ | 10 |
| 6 | ಅನುದಾನ ಬಳಕೆ ಕ್ರಿಯಾಯೋಜನೆ | ಅನುದಾನ ಬಳಕೆಗೆ ವಿಸ್ತಾರವಾದ ಕ್ರಿಯಾಯೋಜನೆ ಹಾಗೂ ಮಾರ್ಗಸೂಚಿ | 10 |
| 7 | ಇನ್ನಿತರೆ ಮಾನದಂಡಗಳು | ಸಮಿತಿಯು ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲು ಇಚ್ಛಿಸುವ ಇತರೆ ಸೂಕ್ತ ಮಾನದಂಡಗಳು | 10 |
| 8 | Presentation | ಕಾರ್ಯ ವೈಖರಿ, ನವೀನತೆ/ ವಿಭಿನ್ನತೆ ಹಾಗೂ ಆರ್ಥಿಕತೆ ಇತ್ಯಾದಿ | 10 |
| | | **ಒಟ್ಟು ಗರಿಷ್ಟ ಅಂಕ** | **100** |

❖ ಕನಿಷ್ಟ 60 ಅಂಕ ಹಾಗೂ ಅದಕ್ಕಿಂತ ಹೆಚ್ಚು ಅಂಕಗಳಿಸಿದ ಎಲ್ಲಾ ಅರ್ಹ ಕೃಷಿ ನವೋದ್ಯಮಗಳ ಅರ್ಜಿಯನ್ನು ಪರಿಶೀಲನೆಗಾಗಿ ಜಿಲ್ಲಾ ಮಟ್ಟದ ಚಾಲನಾ ಸಮಿತಿಗೆ ಸಲ್ಲಿಸುವುದು

**3.2 ಆಯ್ಕೆ ಹಂತ:**

ಜಿಲ್ಲಾಮಟ್ಟದಲ್ಲಿ **ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ** ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ಪರಿಣಿತರು ಹಾಗೂವಿಷಯ ತಜ್ಞರನ್ನೊಳಗೊಂಡಂತಹ **ಜಿಲ್ಲಾಮಟ್ಟದ ಚಾಲನಾಸಮಿತಿಯಲ್ಲಿ**ಆಯ್ಕೆಯಾದ ಅರ್ಹ ಕೃಷಿನವೋದ್ಯಮಗಳನ್ನು ಪರಾಮರ್ಶಿಸುವುದು. ಅರ್ಹವಾದ ಕೃಷಿ ನವೋದ್ಯಮಗಳು, ತೃಪ್ತಿಕರವಾಗಿ ಕಾರ್ಯನಿರ್ವಹಿಸುವುದರ ಕುರಿತು ಖಚಿತಪಡಿಸಿಕೊಂಡು ಹೆಚ್ಚು ಅಂಕ ಗಳಿಸಿದ ಕೃಷಿ ನವೋದ್ಯಮಗಳನ್ನುಅಂತಿಮವಾಗಿಆಯ್ಕೆ ಮಾಡುವುದು.

❖ ಕೃಷಿ ನವೋದ್ಯಮದ ನಾವೀನ್ಯತೆ, ಮಾರುಕಟ್ಟೆ, ವಿಭಿನ್ನತೆ, ವ್ಯವಹಾರ ಮಾದರಿ, ಮಾರುಕಟ್ಟೆ ಸಾಮರ್ಥ್ಯ, ಆರ್ಥಿಕತೆ, ಕಾರ್ಯನಿರ್ವಹಣಾ ತಂಡದ ಸಾಮರ್ಥ್ಯ ಹಾಗೂ ಕಾರ್ಯಸಾಧ್ಯತೆ ಕುರಿತು ಪರಿಶೀಲಿಸುವುದು.

❖ ಸ್ವೀಕೃತವಾದ ಅರ್ಹ ಅರ್ಜಿಗಳ ಸಂಖ್ಯೆ ಹೆಚ್ಚಿದ್ದಲ್ಲಿ ಮೇಲಿನ ಮಾನದಂಡಗಳನ್ವಯ ಹಾಗೂ ನಮೂನೆ-1 ರಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಅರ್ಹ ಕೃಷಿ ನವೋದ್ಯಮಗಳನ್ನು ಆಯ್ಕೆ ಮಾಡುವುದು. ಒಂದು ವೇಳೆ ಒಂದಕ್ಕಿಂತ ಹೆಚ್ಚು ಕೃಷಿ ನವೋದ್ಯಮಗಳು ಸಮಾನ ಅಂಕ ಗಳಿಸಿದ್ದಲ್ಲಿ ಲಾಟರಿ ಪ್ರಕ್ರಿಯೆ ಮೂಲಕ ಕೃಷಿ ನವೋದ್ಯಮಗಳನ್ನು ಆಯ್ಕೆ ಮಾಡುವುದು.

❖ ಆಯ್ಕೆ ಮಾಡಿದ ಕೃಷಿ ನವೋದ್ಯಮಗಳ ಪಟ್ಟಿಯನ್ನು **ರಾಜ್ಯ ಮಟ್ಟದ ಅನುಮೋದನಾ ಸಮಿತಿಗೆ** ಅಂತಿಮ ಅನುಮೋದನೆಗಾಗಿ ಸಲ್ಲಿಸುವುದು.

**3.3 ನಿರ್ಣಾಯಕ ಹಂತ:** ಅಂತಿಮಗೊಳಿಸಲಾದ ಫಲಾನುಭವಿಗಳ ಪಟ್ಟಿಯನ್ನು **ಕೃಷಿ ಆಯುಕ್ತರು, ಕೃಷಿ ಇಲಾಖೆ** ರವರ ಅಧ್ಯಕ್ಷತೆಯಲ್ಲಿನ **ರಾಜ್ಯ ಮಟ್ಟದ ಅನುಮೋದನಾ ಸಮಿತಿಯಲ್ಲಿ**ಅಂತಿಮ ಅನುಮೋದನೆ ನೀಡುವುದು.

❖ ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ ಕೃಷಿ ನವೋದ್ಯಮಗಳನ್ನು ಪರಿಶೀಲಿಸಿ ಪಟ್ಟಿಯನ್ನು ಅಂತಿಮಗೊಳಿಸುವುದು.

❖ ಅಂತಿಮಗೊಳಿಸಲಾದ ಕೃಷಿ ನವೋದ್ಯಗಳಿಗೆ ನಿರ್ದಿಷ್ಟ ಸಮಯದಲ್ಲಿ ಸಾಧಿಸಲು ಪೂರ್ವ ನಿರ್ಧಾರಿತ ಮೈಲಿಗಲ್ಲುಗಳನ್ನು ಗುರುತಿಸುವುದು.

❖ ಅಂತಹ ಪೂರ್ವ ನಿರ್ಧಾರಿತ ಮೈಲಿಗಲ್ಲುಗಳನ್ನು ಸಾಧಿಸಲುಸಹಾಯಧನವನ್ನುಬ್ಯಾಂಕ್ ಸಾಲದ ಮುಖಾಂತರಅಂತಿಮಗೊಳಿಸಲಾದ ಕೃಷಿ ನವೋದ್ಯಗಳಿಗೆ ಜಿಲ್ಲೆಯಿಂದ ಅನುದಾನ ನೀಡುವಂತೆ ಸೂಚಿಸುವುದು.

**C. ಕೃಷಿ ನವೋದ್ಯಮಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ (Mentoring and Acceleration Programme –MAP):**

ಆಯ್ಕೆಯಾದ ನವೋದ್ಯಮಿಗಳಿಗೆ ಆರಂಭಿಕ ಹಂತದಲ್ಲಿ ಮಾರುಕಟ್ಟೆ ವ್ಯವಸ್ಥೆ, ವ್ಯವಹಾರ ಮಾದರಿ ಹಾಗೂ ಉದ್ಯಮ ಪ್ರಾರಂಭಿಸಲು/ ವಿಸ್ತರಿಸಲು ಅವಶ್ಯವಿರುವ ವಿಷಯಗಳ ಕುರಿತು ಸೂಕ್ತ ತರಬೇತಿ ಅಗತ್ಯವಿರುತ್ತದೆ.

ಈ ನಿಟ್ಟಿನಲ್ಲಿ ಆಯ್ಕೆಯಾದ ನವೋದ್ಯಮಿಗಳ ಸಾಮರ್ಥ್ಯಾಭಿವೃದ್ಧಿಗೆ ಕೃಷಿ ವಿಶ್ವವಿದ್ಯಾಲಯ, ICAR, CFTRI, CSIR,C-CAMPಹಾಗೂ ಇತರೆ ಸಂಶೋಧನಾ ಸಂಸ್ಥೆಗಳಾದವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಸ್ಥಾಪಿತವಾಗಿರುವ ಕೃಷಿ ನಾವೀನ್ಯತೆಗಾಗಿ ಶ್ರೇಷ್ಠತೆಯ ಕೇಂದ್ರಗಳ ಮೂಲಕ ತರಬೇತಿಗಳನ್ನು ನೀಡಲಾಗುವುದು. ತದನಂತರ ತರಬೇತಿ ಒದಗಿಸಿದ ಸಂಸ್ಥೆಗಳಿಗೆ ತರಬೇತಿ ಶುಲ್ಕವನ್ನು ಪಾವತಿ ಮಾಡುವುದು.

## 4. ಸಹಾಯಧನ ವಿತರಣೆ:

ಆಯ್ಕೆಯಾದ ನವೋದ್ಯಮಿಗಳಿಗೆಪ್ರಗತಿ ಸಾಧಿಸಲು **ಪೂರ್ವ ನಿರ್ಧಾರಿತ ಮೈಲಿಗಲ್ಲುಗಳನ್ನು** ಗುರುತಿಸುವುದು.

**4.1 ಹೊಸ ಕೃಷಿ ನವೋದ್ಯಮಗಳಿಗೆ (Start-ups at incubation stage)**ಈ ಕೆಳಗಿನ ಮೈಲಿಗಲ್ಲುಗಳಲ್ಲಿ ಅವುಗಳ ಕಾರ್ಯಕ್ಷೇತ್ರಕ್ಕನುಗುಣವಾಗಿ ಪೂರಕವಾದ ಮೈಲಿಗಲ್ಲುಗಳನ್ನು ಆಯ್ಕೆ ಮಾಡುವುದು.

- **Proof of Concept:**ಕೃಷಿ ನವೋದ್ಯಮಗಳು ತಮ್ಮ ಉತ್ಪನ್ನ/ ಸೇವೆಯನ್ನು ಅಭಿವೃದ್ಧಿಪಡಿಸಿ, ಅದರ ಯಶಸ್ವಿ ಕಾರ್ಯವೈಖರಿ ಕುರಿತು ಖಾತರಿ ಪಡಿಸುವುದು
- **Prototype development:** ಕೃಷಿ ನವೋದ್ಯಮಗಳ ಉತ್ಪನ್ನಗಳ ಅಂತಿಮ ಮಾದರಿಯನ್ನು (Final Working Model)ಅಭಿವೃದ್ಧಿಪಡಿಸಿ ಅದರ ಕಾರ್ಯಕ್ಷಮತೆ ಖಾತರಿ ಪಡಿಸುವುದು
- **Product/Field trials:** ಕೃಷಿ ನವೋದ್ಯಮಗಳ ಉತ್ಪನ್ನವನ್ನು ಅಭಿವೃದ್ಧಿಪಡಿಸಿದ ನಂತರ ಸದರಿ ಉತ್ಪನ್ನವು ವಿವಿಧ ರೀತಿಯ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಕುರಿತು ಖಾತರಿ ಪಡಿಸುವುದು
- **ಬಂಡವಾಳ ಸಂಗ್ರಹಣೆ**: ಕೃಷಿ ನವೋದ್ಯಮವನ್ನು ನಿರ್ವಹಿಸಲು ಬಂಡವಾಳದ ಮೂಲಗಳು ಹಾಗೂ ಕ್ರಿಯಾಯೋಜನೆಯನ್ನು ಸಲ್ಲಿಸುವುದು
- **Market Launch:**ತಮ್ಮ ಉತ್ಪನ್ನ/ಸೇವೆಯನ್ನು ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ಚಾಲನೆ ನೀಡಿ, ಉತ್ತಮವಾಗಿ ವ್ಯಾಪಾರ ವಹಿವಾಟು/ಕೆಲಸ ನಿರ್ವಹಣೆ ಕುರಿತು ಖಾತರಿ ಪಡಿಸುವುದು
- **ಮಾರಾಟ ಗುರಿ ಹಾಗೂ ಆದಾಯ ಗಳಿಕೆ:** ಕೃಷಿ ನವೋದ್ಯಮಗಳು ಯೋಜನಾ ವರದಿಯಲ್ಲಿ ನೀಡಿರುವ ಸಮಯಾಧಾರಿತ ಮಾರಾಟ ಗುರಿಗಳು ಹಾಗೂ ಆದಾಯ ಗಳಿಕೆಯಾಗಿರುವ ಕುರಿತು ಹಾಗೂ ಲಾಭದ ಕುರಿತು Financial statement ಮುಖಾಂತರ ಖಾತರಿಪಡಿಸುವುದು
- **ಬ್ರ್ಯಾಂಡಿಂಗ್ ಹಾಗೂ Market Stability:**ಕೃಷಿ ನವೋದ್ಯಮಗಳು ತಮ್ಮ ಬ್ರ್ಯಾಂಡ್ ವೃದ್ಧಿಸಲು ಹಾಗೂ ಆದಾಯದಲ್ಲಿ ಸುಸ್ಥಿರತೆ ಸಾಧಿಸಿರುವ ಕುರಿತು ಖಾತರಿಪಡಿಸುವುದು.

**4.2** ಈಗಾಗಲೇ ಸ್ಥಾಪಿಸಲಾದ ನವೋದ್ಯಮಗಳ ವಿಸ್ತರಣೆ ಅಥವಾ ಮೇಲ್ದರ್ಜೆಗೇರಿಸಲು **(Scale up of business/ Expansion of established Startups)**ಅವುಗಳ ಕಾರ್ಯವೈಖರಿಗೆ ಅನುಗುಣವಾಗಿ ಈ ಕೆಳಗಿನವುಗಳಲ್ಲಿ ಸೂಕ್ತವಾದ ಮೈಲಿಗಲ್ಲುಗಳನ್ನು ನೀಡಲಾಗುವುದು

- **ನೂತನ ಮಾರಾಟ ತಂತ್ರ/ ವ್ಯವಹಾರ ಮಾದರಿ:** ಕೃಷಿ ನವೋದ್ಯಮಗಳು ತಮ್ಮ ಉದ್ಯಮದ ವಿಸ್ತರಣೆಗಾಗೆ ರೂಪಿಸಿರುವ Marketing Strategyಹಾಗೂ ಕಾರ್ಯಸಾಧ್ಯತೆ ಕುರಿತು ಖಾತರಿಪಡಿಸುವುದು.

- **ನೂತನ ತಾಂತ್ರಿಕತೆಯ ಅಳವಡಿಕೆ:** ವ್ಯವಹಾರವನ್ನು ಉನ್ನತೀಕರಿಸಲು ಬಳಸುವ ನೂತನ ತಾಂತ್ರಿಕತೆಗಳು, ಯಂತ್ರೋಪಕರಣಗಳ ಸ್ಥಾಪನೆ ಕುರಿತು ಖಾತರಿಪಡಿಸುವುದು.

- **ಹೆಚ್ಚುವರಿ ಉತ್ಪನ್ನಗಳ/ ಸೇವೆಗಳ ಚಾಲನೆ :**ಉದ್ಯಮ ವಿಸ್ತರಿಸಲು ನೂತನ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದು.

- **ಬಂಡವಾಳ ಸಂಗ್ರಹಣೆ**: ಕೃಷಿ ನವೋದ್ಯಮವನ್ನು ನಿರ್ವಹಿಸಲು ಬಂಡವಾಳದ ಮೂಲಗಳು ಹಾಗೂ ಕ್ರಿಯಾಯೋಜನೆಯನ್ನು ಸಲ್ಲಿಸುವುದು.

- **ಮಾರಾಟ ಗುರಿ ಹಾಗೂ ಆದಾಯ ಗಳಿಕೆ:** ಕೃಷಿ ನವೋದ್ಯಮಗಳು ಯೋಜನಾ ವರದಿಯಲ್ಲಿ ನೀಡಿರುವ ಸಮಯಾಧಾರಿತ ಮಾರಾಟ ಗುರಿಗಳು ಹಾಗೂ ಆದಾಯ ಗಳಿಕೆಯಾಗಿರುವ ಕುರಿತು ಹಾಗೂ ಲಾಭದ ಕುರಿತು Financial statement ಮುಖಾಂತರ ಖಾತರಿಪಡಿಸುವುದು.

- **ಬ್ರ್ಯಾಂಡಿಂಗ್ ಹಾಗೂ Market Stability:** ಕೃಷಿ ನವೋದ್ಯಮಗಳು ತಮ್ಮ ಬ್ರ್ಯಾಂಡ್ ವೃದ್ಧಿಸಲು ಹಾಗೂ ಆದಾಯದಲ್ಲಿ ಸುಸ್ಥಿರತೆ ಸಾಧಿಸಿರುವ ಕುರಿತು ಖಾತರಿಪಡಿಸುವುದು.

**4.3 ಸಹಾಯಧನ ವಿತರಣೆ ಪ್ರಕ್ರಿಯೆ**

1. ಸಹಾಯಧನವನ್ನು ಪಡೆಯಲು ಆಯ್ಕೆಯಾದ ಕೃಷಿ ನವೋದ್ಯಮಗಳು **ಕಡ್ಡಾಯವಾಗಿ ಬ್ಯಾಂಕ್ಸಾಲವನ್ನು** ಪಡೆದಿರುವ ಕುರಿತು ಖಾತರಿಪಡಿಸುವುದು.
2. ಆಯ್ಕೆಯಾದ ಕೃಷಿ ನವೋದ್ಯಮಿಗಳ ಯೋಜನಾವರದಿಯನ್ನು ಪರಿಶೀಲಿಸಿ ಶೇ.50ರಷ್ಟು ಸಹಾಯಧನ ಮೊತ್ತವನ್ನು **ಕೇಂದ್ರ ಕಛೇರಿಯಿಂದ ಖಜಾನೆ-2 (K-2)**ಮೂಲಕ ಸದರಿ ಜಿಲ್ಲೆಗಳಿಗೆ ಬಿಡುಗಡೆ ಮಾಡುವುದು.
3. ತದನಂತರ ಆಯ್ಕೆಯಾದ ನವೋದ್ಯಮಗಳಿಗೆ ಬ್ಯಾಂಕ್ ಸಾಲದ ಮುಖಾಂತರ (Back-ended subsidy) ನೀಡಲಾಗುವುದು.
4. ಸಹಾಯಧನ ವಿತರಣೆ ನಂತರ ಆಯ್ಕೆಯಾದ ಕೃಷಿ ನವೋದ್ಯಮಗಳು ಮೇಲಿನವುಗಳಲ್ಲಿ ಗುರುತಿಸಲಾದ ಸೂಕ್ತ ಮೈಲಿಗಲ್ಲುಗಳನ್ನು ಸಾಧಿಸಿರುವ ಕುರಿತು ಸೂಕ್ತ ವರದಿ ಮತ್ತು ದಾಖಲೆಗಳನ್ನು ಸಲ್ಲಿಸುವುದು.

**ಸೂಚನೆ**: ಆಯ್ಕೆಯಾದ ಅರ್ಹ ಕೃಷಿ ನವೋದ್ಯಮಗಳು ಕೃಷಿ ಮೂಲಭೂತ ಸೌಕರ್ಯ ನಿಧಿ **(AIF)** ಯೋಜನೆಯಡಿ **Interest subvention** ಪಡೆಯಲು ಅರ್ಹರಿದ್ದಲ್ಲಿ, ಜಿಲ್ಲಾ ಮಟ್ಟದಲ್ಲಿ ಈ ಕುರಿತು ಮಾಹಿತಿ ನೀಡಿ,ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಸಂಪೂರ್ಣ ಸಹಕಾರ ಒದಗಿಸುವುದು.

## 5. ಉಸ್ತುವಾರಿ ಹಾಗೂ ಮೌಲ್ಯಮಾಪನ:

1. ಆಯ್ಕೆಯಾದ ಕೃಷಿ ನವೋದ್ಯಮಗಳಿಗೆ ನೀಡಲಾದ ಸೂಕ್ತ ಮೈಲಿಗಲ್ಲುಗಳನ್ನು ಸಾಧಿಸಿರುವಕುರಿತು ಮೌಲ್ಯ ಮಾಪನ ನಡೆಸುವುದು.
2. ಆಯ್ಕೆಯಾದ ಕೃಷಿ ನವೋದ್ಯಮಗಳು ಸೂಚಿಸಲಾದ ಅಂಶಗಳನ್ವಯ ತ್ರೈಮಾಸಿಕವಾಗಿ ಪ್ರಗತಿ ವರದಿಗಳನ್ನು ಸಲ್ಲಿಸುವುದು.
3. ಆಯ್ಕೆಯಾಗಿ ಸಹಾಯಧನ ಪಡೆದ ಕೃಷಿ ನವೋದ್ಯಮಗಳು ಕನಿಷ್ಟ 3 ವರ್ಷದವರೆಗೆ ಉದ್ದಿಮೆಯನ್ನು ಮುಂದುವರೆಸುವುದು. ಹಾಗೆಯೇ ಈ ಕುರಿತು ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ ಕಾರ್ಯಕ್ರಮ ಅನುಷ್ಠಾನದ ಉಸ್ತುವಾರಿಯನ್ನು ನಿಯತಕಾಲಿಕವಾಗಿ (ಕನಿಷ್ಟ- 3 ವರ್ಷಗಳವರೆಗೆ) ಮಾಡಿ ಕ್ರೋಢಿಕೃತ ವರದಿಯನ್ನು ಸಲ್ಲಿಸುವುದು.
4. ಕೃಷಿ ನವೋದ್ಯಮಗಳು ವರ್ಷಾಂತ್ಯಕ್ಕೆ ಹಣ ಬಳಕೆ ಪ್ರಮಾಣ ಪತ್ರ ಹಾಗೂ Financial Statement ಗಳನ್ನು ಸಲ್ಲಿಸುವುದು.

## 6. ಯೋಜನೆಯ ಸಾರಾಂಶ:

ಕೃಷಿ ಕ್ಷೇತ್ರದಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸಲು ಹಾಗೂ ಗ್ರಾಮೀಣಭಾಗದ ಯುವಕರಿಗೆ ಉದ್ಯೋಗ ಸೃಜನೆಗಾಗಿ ಕೃಷಿಯಲ್ಲಿನ ನೂತನ ತಾಂತ್ರಿಕತೆಗಳು ಹಾಗೂ ನವೀನ ಪರಿಕಲ್ಪನೆಗಳ ವಾಣಿಜ್ಯೀಕರಣವನ್ನು ಉತ್ತೇಜಿಸಲು ಕೃಷಿ ನವೋದ್ಯಮ ಕಾರ್ಯಕ್ರಮವನ್ನು 2023-24ನೇ ಸಾಲಿನಲ್ಲಿ ಅನುಷ್ಠಾನ ಮಾಡಲಾಗುತ್ತಿದೆ.

ರಾಜ್ಯಾದ್ಯಂತ ಕೃಷಿ ವಲಯದಲ್ಲಿ ನೂತನ ಆವಿಷ್ಕಾರಗಳು, ನವೀನ ಉತ್ಪನ್ನಗಳು ಹಾಗೂ ಸೇವೆಗಳನ್ನು ಒಳಗೊಂಡಿರುವ ಕೃಷಿ ನವೋದ್ಯಮಗಳಿಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸದರಿ ಯೋಜನೆಯನ್ನು ರೂಪಿಸಲಾಗಿರುತ್ತದೆ.

ಅರ್ಜಿ ಸಲ್ಲಿಸಲಾದ ಕೃಷಿ ನವೋದ್ಯಮಗಳ ಪೈಕಿ ಅರ್ಹ ಕೃಷಿ ನವೋದ್ಯಮಗಳನ್ನು ವಿವಿಧ ಹಂತಗಳಲ್ಲಿ ಪರಿಶೀಲನೆ ನಡೆಸಿ ಹೊಸ ಕೃಷಿ ನವೋದ್ಯಮಗಳಿಗೆ ಶೇ. 50 ರಷ್ಟು ಕನಿಷ್ಟ ರೂ. 5.00 ಲಕ್ಷದಿಂದ ಗರಿಷ್ಟ ರೂ. 20.00 ಲಕ್ಷ ಹಾಗೂ ಈಗಾಗಲೇ ಸ್ಥಾಪಿಸಲಾದ ಕೃಷಿ ನವೋದ್ಯಮಗಳ ವಿಸ್ತರಣೆಗೆ ಕನಿಷ್ಟ ರೂ. 20.00 ಲಕ್ಷದಿಂದ ಗರಿಷ್ಟ ರೂ. 50.00 ಲಕ್ಷದವರೆಗಿನ ಸಹಾಯಧನವನ್ನು ಖಜಾನೆ-2 ಮೂಲಕ(Back-ended subsidy through bank loan) ನೀಡಲಾಗುವುದು.

ಆಯ್ಕೆಯಾದ ಕೃಷಿ ನವೋದ್ಯಮಗಳ ಸಾಮರ್ಥ್ಯಾಭಿವೃದ್ಧಿಗಾಗಿ ವಿವಿಧ ತರಬೇತಿ ಕೇಂದ್ರಗಳಲ್ಲಿ ಹಾಗೂ Incubation Centreಗಳಲ್ಲಿ ತರಬೇತಿ ನೀಡಲಾಗುವುದು.

## ಅನುಬಂಧ-1

## ಕೃಷಿ ನವೋದ್ಯಮದ ಭೌತಿಕ ಮತ್ತು ಆರ್ಥಿಕ ಗುರಿಗಳ ವಿವರ

## ಲೆಕ್ಕ ಶೀರ್ಷಿಕೆ: 2401-00-195-0-01 (106)

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಘಟಕಗಳು | ಸರಾಸರಿ ಘಟಕ ವೆಚ್ಚ | ಘಟಕಗಳ ಸಂಖ್ಯೆ | ಗರಿಷ್ಟ ಸಹಾಯಧನ |
|---|---|---|---|---|
| 1 | ಹೊಸಕೃಷಿನವೋದ್ಯಮಗಳಿಗೆ(Startups at Incubation stage)ಆರ್ಥಿಕನೆರವು (ರೂ. 5.00 ಲಕ್ಷ- ರೂ. 20.00 ಲಕ್ಷ) | 12.50 | 54 | 680.00 |
| 2 | ಸ್ಥಾಪಿತ ನವೋದ್ಯಮಗಳವಿಸ್ತರಣೆಅಥವಾಮೇಲ್ದರ್ಜೆಗೇರಿಸಲು (**Scale up of business/ Expansion of established Startups**)ಆರ್ಥಿಕನೆರವು(ರೂ. 20.00 ಲಕ್ಷ- ರೂ. 50.00 ಲಕ್ಷ) | 35.00 | 8 | 290.00 |
| 3 | ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ (Mentoring and Acceleration Programme **-MAP)** | | - | 20.00 |
| 4 | Webpage ಅಭಿವೃದ್ಧಿ, ಉಸ್ತುವಾರಿ ಹಾಗೂ ಮೌಲ್ಯಮಾಪನ | | - | 10.00 |
| | ಒಟ್ಟು | | 62 | 1000.00 |

**ಸೂಚನೆ:**

1.ಯೋಜನಾ ಅನುಷ್ಠಾನದ ಕಾರ್ಯಗತಿ ಹಾಗೂ ಬೇಡಿಕೆ ಆಧಾರಿತವಾಗಿ ಅಂತರ ಘಟಕ ಬದಲಾವಣೆಯನ್ನು ರಾಜ್ಯ ಮಟ್ಟದಲ್ಲಿ ಮಾಡಲಾಗುವುದು

2. ಅದೇ ರೀತಿ ಜಿಲ್ಲಾವಾರು ಪ್ರಗತಿ ಹಾಗೂ ಬೇಡಿಕೆಗನುಗುಣವಾಗಿ ಘಟಕಗಳನ್ನು ಜಿಲ್ಲಾವಾರುಹಂಚಿಕೆ ಮಾಡಲಾಗುವುದು

3. ಯೋಜನಾ ವೆಚ್ಚದನ್ವಯ ಭೌತಿಕ ಸಂಖ್ಯೆಗಳ ಬದಲಾವಣೆಗೆ ಅವಕಾಶವಿರುತ್ತದೆ.

4. ಮೊದಲು ಸ್ವೀಕೃತವಾಗುವ ಅರ್ಜಿಗಳಿಗೆ ಆದ್ಯತೆ ನೀಡಿ ಅನುದಾನ ಲಭ್ಯತೆಗೆ ಅನುಗುಣವಾಗಿ ಅರ್ಜಿಗಳನ್ನು ಅಂತಿಮಗೊಳಿಸುವುದು

## ನಮೂನೆ-1

| ಕ್ರ ಸಂ | ಆಯ್ಕೆ ಮಾನದಂಡ | ವಿವರ | ಗರಿಷ್ಟ ಅಂಕ |
|---|---|---|---|
| 1. | ಕೃಷಿ ನವೋದ್ಯಮದ ಅವಶ್ಯಕತೆ | ಮಾರುಕಟ್ಟೆಯಗಾತ್ರ, ಸಾಮರ್ಥ್ಯ, ಸದರಿ ಕೃಷಿ ನವೋದ್ಯಮ ಪರಿಹರಿಸಬಹುದಾದ ಸಮಸ್ಯೆ, ಸುಸ್ಥಿರ ಅಭಿವೃದ್ಧಿ ಗುರಿ, ಉದ್ದೇಶ ಇತ್ಯಾದಿ | 10 |
| 2. | ಕಾರ್ಯಸಾಧ್ಯತೆ | ನಾವೀನ್ಯತೆಯ ಕಾರ್ಯಸಾಧ್ಯತೆ, ಬಳಸುವ ತಾಂತ್ರಿಕತೆ/ ಪದ್ಧತಿ, ಮಾನ್ಯತೆ ಹಾಗೂ ಉತ್ಪನ್ನಗಳ ಅಭಿವೃದ್ಧಿಯ ಮಾರ್ಗಸೂಚಿ | 20 |
| 3. | ಸಂಭವನೀಯ ಪರಿಣಾಮ | ಗ್ರಾಹಕರ ಸಂಖ್ಯೆ, ಉತ್ಪನ್ನಗಳ ಪ್ರತ್ಯಕ್ಷ ಹಾಗೂ ಪರೋಕ್ಷ ಬಳಕೆ, ತಾಂತ್ರಿಕ ಪರಿಣಾಮ ಹಾಗೂ ಪ್ರಾಮುಖ್ಯತೆ | 20 |
| 4 | ನಾವೀನ್ಯತೆ | ತಂತ್ರಜ್ಞಾನದ ಅನನ್ಯ ಮಾರಾಟ ಬಿಂದು (USP),Patent ಇತ್ಯಾದಿ | 10 |
| 5 | ಕಾರ್ಯ ತಂಡ | ತಂಡದ ಸಾಮರ್ಥ್ಯ, ತಾಂತ್ರಿಕ, ಆರ್ಥಿಕ ಹಾಗೂ ವ್ಯವಹಾರ ಪರಿಣಿತಿ | 10 |
| 6 | ಅನುದಾನ ಬಳಕೆ ಕ್ರಿಯಾಯೋಜನೆ | ಅನುದಾನ ಬಳಕೆಗೆ ವಿಸ್ತಾರವಾದ ಕ್ರಿಯಾಯೋಜನೆ ಹಾಗೂ ಮಾರ್ಗಸೂಚಿ | 10 |
| 7 | ಇನ್ನಿತರೆ ಮಾನದಂಡಗಳು | ಸಮಿತಿಯು ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲು ಇಚ್ಛಿಸುವ ಇತರೆ ಸೂಕ್ತ ಮಾನದಂಡಗಳು | 10 |
| 8 | Presentation | ಕಾರ್ಯ ವೈಖರಿ, ನವೀನತೆ/ ವಿಭಿನ್ನತೆ ಹಾಗೂ ಆರ್ಥಿಕತೆ ಇತ್ಯಾದಿ | 10 |
| | | **ಒಟ್ಟು ಗರಿಷ್ಟ ಅಂಕ** | **100** |

# ನಮೂನೆ-2

## ಹಣ ಬಳಕೆ ಪ್ರಮಾಣ ಪತ್ರ (Utilization Certificate)

| Sl. No | Letter no and date | Release Amount (Rs. in Lakhs) |
|---|---|---|
| | | |
| | **Total** | |

Certified that of Rs. _____ Lakhs of grants sanctioned under Head of account **2401-00-195-0-01 (106)** during the year 2023-24 in favour of Agri-Startup Scheme (Krishi Navodyama) under this Department Letter No. given in the margin a sum ofRs.______ Lakhs has been utilized for the purpose which it was sanctioned and the balance of Rs. _______ Lakhs remaining unutilized at the end of the year.

2. The Utilization Certificate should also disclose whether the specified, quantified and qualitative targets that should have been reached against the amount utilized, were in fact reached, and if not, the reasons thereof. They should contain an output-based performance assessment instead of input-based performance assessment.

3. Certified that I have satisfied myself that the conditions on which the grants-in-aid was sanctioned have been duly fulfilled/are being fulfilled and that I have exercised the following checks to see that the money was actually utilized for the purpose for which it was sanctioned.

**Signature:**

**Designation:**

**Startup Name:**

**Date:**